**PW–4 CROSS**

**ದಿಃ 26.12.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**( ಮುಂದುವರೆದ ಮುಖ್ಯ ವಿಚಾರಣೆ ದಿಃ 07.10.2023 ರ ಆದೇಶದಂತೆ 2 ರಿಂದ 4 ನೇ ಆರೋಪಿಗಳನ್ನು ಪ್ರಕರಣದಲ್ಲಿ ಸೇರಿಸಲಾಗಿದ್ದು ಆ ಬಗ್ಗೆ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು. )**

ಮಾಸ್ತಮ್ಮ ದೇವಸ್ಥಾನದ ಬಳಿ ಅಡ್ಡ ಹಾಕಿದರು ಎಂದು ಹೇಳಲಾದ ಪ್ರವೀಣ , ಅರ್ಜುನ , ಶಿವು , ಸಿದ್ದೇಶರವನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 4 ನೇ ಆರೋಪಿಗಳನ್ನು ನೋಡಿ ಸದರಿ ಪ್ರವೀಣ , ಅರ್ಜುನ , ಶಿವು , ಸಿದ್ದೇಶ ಎಂದು ಗುರುತಿಸಿರುತ್ತಾರೆ . ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ .

**ಮುಂದುವರೆದ ಪಾಟೀ ಸವಾಲು 1 ಮತ್ತು 2 ಆರೋಪಿ ಪರ ವಕೀಲರಿಂದಃ–**

ಘಟನೆ ನಡೆದಾಗ ಲಾಕ್ ಡೌನ್ ಇತ್ತು ಎಂದರೆ ಸರಿ . ರಸ್ತೆಯಲ್ಲಿ ಪೊಲೀಸರು ಮಾತ್ರ ಇರುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ . ಆಗ ಮೋಟಾರ್ ಸೈಕಲ್ ನ್ನು ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿ . ಆ ಸಂದರ್ಭದಲ್ಲಿ ಮೋಟಾರ್ ಸೈಕಲ್ ಅಥವಾ ವಾಹನಗಳನ್ನು ತೆಗೆದುಕೊಂಡು ಹೋದರೆ ಪೊಲೀಸರು ಅವುಗಳನ್ನು ಸಾಮಾನ್ಯವಾಗಿ ವಶಪಡಿಸಿಕೊಳ್ಳುತ್ತಿದ್ದರು ಎಂದರೆ ಸರಿ . ನಮ್ಮ ತಾಯಿಗೆ ಕರ್ತವ್ಯ ಇದುದ್ದರಿಂದ ಗಾಡಿ ತೆಗೆದುಕೊಂಡು ಹೋಗಿದ್ದೆ ಎನ್ನುತ್ತಾರೆ . ಮಾಸ್ತಮ್ಮ ದೇವಸ್ಥಾನದ ಬೀದಿಯಲ್ಲಿ ನಮ್ಮನ್ನು ಅಡ್ಡ ಹಾಕಿ ವಡ್ಡರ ಜಾತಿ ನಾಡ ಎಂದು ಅರ್ಜುನ ಜಾತಿ ಹಿಡಿದು ಪ್ರಾಣ ಬೆದರಿಕೆ ಹಾಕಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳಿದಂತೆಯಾವುದೇ ಘಟನೆ ನಡೆಯದೇ ಇದ್ದರು ನಾನು ನನ್ನ ತಾಯಿ ಸಂಜು ಹಾಕಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲು 3 ನೇ ಆರೋಪಿ ಪರ ವಕೀಲರಿಂದಃ–**

ಮಾಸ್ತಮ್ಮ ದೇವಸ್ಥಾನದ ಹತ್ತಿರ ಆ ಅರೀತಿ ಯಾವುದೇ ಘಟನೆ ನಡೆಯದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ .**

**ಪಾಟೀ ಸವಾಲು 4 ನೇ ಆರೋಪಿ ಪರ ವಕೀಲರಿಂದಃ–**

ದಿಃ 20.04.2020 ರಂದು ನಾವು ಅಂಗನವಾಡಿ ಕೇಂದ್ರಕ್ಕೆ ಹೋಗಿದ್ದೇವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾವು ಅಲ್ಲಿಗೆ ಹೋಗಿಲ್ಲ , ಯಾವುದೇ ಕೆಲಸ ಮಾಡಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ . ಕರೋನಾ ಇದ್ದ ಕಾರಣ ನಾವು ಹೋಗಿರಲಿಲ್ಲ ಎಂದರೆ ಸರಿಯಲ್ಲ . ಸದರಿ 2 ಬೈಕ್ ಗಳ ನೊಂದಣಿ ಸಂಖ್ಯೆ ನನಗೆ ಹೇಳಲಾಗುವುದಿಲ್ಲ , ಸಾಕ್ಷಿ ಮುಂದುವರೆದು ನನಗೆ ಭಯ ಆಗಿದ್ದರಿಂದ ಗುರುತಿಸಲಾಗುವುದಿಲ್ಲ ಎನ್ನುತ್ತಾರೆ . 2 ಬೈಕ್ ಗಳಲ್ಲಿ 5 ಜನ ಬಂದಿದ್ದರು ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ 4 ಜನ ಎನ್ನುತ್ತಾರೆ . ಯಾರು ಬೈಕ್ ನಲ್ಲಿ ಬಂದಿಲ್ಲ , ಅಡ್ಡಗಟ್ಟಿಲ್ಲ , ಬೈದಿಲ್ಲ ಎಂದರೆ ಸರಿಯಲ್ಲ . 4 ನೇ ಆರೋಪಿ ಆ ಸ್ಥಳದಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ . 4 ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನಾನು ನೋಡುತ್ತಿರುವುದು ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

### ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ –26.12.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಚೇತನ್ ಕುಮಾರ್ | ಪ್ರಾ.ಸಾ. | – | 13 |
| ತಂದೆಯ ಹೆಸರು | – | ಹನುಮಂತಪ್ಪ | ಚಾ.ಸಾ. | – | 13 |
| ವಯಸ್ಸು | – | 17 ವರ್ಷ | | | |
| ಉದ್ಯೋಗ | – | ವಿದ್ಯಾರ್ಥಿನಿ | | | |
| ವಾಸ ಸ್ಥಳ | – | ಕಣಿವೆಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

1. ಚಾಸಾ 1 ನನ್ನ ತಾಯಿ ಚಾಸಾ – 10 ನನ್ನ ತಂದೆ , ಚಾಸಾ 11 ನನ್ನ ತಾತ . ಚಾಸಾ 12 ನನ್ನ ತಂಗಿ. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು . ಆರೋಪಿಗಳು ಗೊಲ್ಲ ಜನಾಂಗದವರು . ನಾವು ವಡ್ಡ ಜನಾಂಗದವರು .

2. ದಿಃ 01.08.2020 ರಂದು ಕಣಿವೆಜೋಗಿಹಳ್ಳಿಯ ನಮ್ಮ ಹೊಲದಲ್ಲಿ ಇದ್ದ , ಮೆಕ್ಕೆ ಜೋಳ , ಅಡಿಕೆ ತೋಟಕ್ಕೆ , ಬೆಂಕಿ ಇಟ್ಟು , ಮೋಟರ್ ಲೆನ್ತ್ ಪೈಪ್ ಸುಟ್ಟು ಹಾಕಿದರು . ಬೋರ್ ವೆಲ್ ಹತ್ತಿರ ಇದ್ದಸಿಂಟೆಕ್ಸ್ ಸುಟ್ಟರು. ಹೊಲದಲ್ಲಿ ನಾನು ಚಾಸಾ 1 , 10 ರಿಂದ 12 ಮತ್ತು ನನ್ನ ಮಾವ ಇದ್ದೇವು . ಹೊಲದಲ್ಲಿ ಗುಡಿಸಲು ಹಾಕಿಕೊಂಡಿದ್ದೇವೆ . ಗುಡಿಸಲಿಗೂ ಆರೋಪಿಗಳು ಬೆಂಕಿ ಇಟ್ಟರು . ಹೊಲದಲ್ಲಿ ಕುರಿ ಓಡಾಡಲು ದಾರಿ ಬಿಟ್ಟು ಕೊಡಿ ಎಂದು ಗಲಾಟೆ ಮಾಡಿದರು . ನಮ್ಮ ತಂದೆ ತಾಯಿಗೆ ಹೊಡೆದು ಕೆಟ್ಟ ಮಾತುಗಳಿಂದ ಬೈದರು . ಸೂಳೇ , ಹಾದರ್ಗಿತ್ತಿ , ಬೋಳಿ ಮಕ್ಕಳಾ , ವಡ್ಡಸೂಳೇ ಮಕ್ಕಳ ಎಂದು ಬೈದರು . ಆರೋಪಿಗಳು ಹೊಡೆದಿದ್ದರಿಂದ ನನಗೆ , ಚಾಸಾ 1 , ಚಾಸಾ 10 ರಿಂದ 12 ರವರಿಗೆ ಗಾಯಗಳಾದವು . ಚಿತ್ರದುರ್ಗದ

ಆಸ್ಪತ್ರೆಗೆ ಬಂದೇವು . ನ್ಯಾಯಾಲಯದ ಮುಂದಿರುವ ಆರೋಪಿಗಳು ಹಾಗೂ ಇನ್ನು ಬೇರೆ ಜನರು ಬಂದಿದ್ದರು . ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ .

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ ಎ ಕೆ ವಕೀಲರಿಂದ –**

3. ನಾನು ಆಗ 7 ನೇ ತರಗತಿ ಓದುತ್ತಿದ್ದೆ . ಹೊಳಲ್ಕೆರೆಯ ಶಾಲೆಗೆ ಹೋಗುತ್ತಿದ್ದೆ . ಹೊಳಲ್ಕೆರೆಯಿಂದ ನಮ್ಮ ಊರಿಗೆ 10 ಕಿ ಮಿ ಆಗುತ್ತದೆ . ಶನಿವಾರ ಬೆಳಗ್ಗೆ 9 ಗಂಟೆಗೆ ಹೋಗಿ 12 ಗಂಟೆಗೆಬರುತ್ತಿದ್ದೆ . ಉಳಿದ ದಿನಗಳು ಬೆಳಗ್ಗೆ 9 ರಿಂದ 4 ಗಂಟೆವರೆಗೆ ಶಾಲೆ ಇರುತ್ತಿತ್ತು . ಊರಿನಲ್ಲಿ ಇರುವ ಮನೆಯ ಅಕ್ಕ ಪಕ್ಕ ನನ್ನ ಚಿಕ್ಕಪ್ಪ ಮತ್ತು ಮಾವಂದಿರು ಇದ್ದಾರೆ . ಊರಿನಿಂದ ಜಮೀನಿಗೆ 2 ಕಿ ಮಿ ಆಗುತ್ತದೆ . ಯಾರು ಅಡಿಕೆ ತೋಟವನ್ನು ಮತ್ತು ಸಿಂಟೆಕ್ಸ್ ಟ್ಯಾಂಕ್‌ಗೆ ಯಾರು ಬೆಂಕಿ ಇಟ್ಟರು ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ನ್ಯಾಯಾಲಯದ ಮುಂದಿರುವ ಆರೋಪಿಗಳು ಸುಟ್ಟರು . ನ್ಯಾಯಾಲಯದ ಮುಂದಿರುವ ಆರೋಪಿಗಳ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿ . ನನಗೆ ಚಾಸಾ 1 , 10 ರಿಂದ 12 ಮತ್ತು ನನ್ನ ಮಾವಂದಿರಿಗೆ ಎಲ್ಲೆಲ್ಲಿ ಗಾಯಗಳು ಆದವು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ . ನನ್ನ ಬಲಗಾಲಿಗೆ ರಕ್ತಗಾಯವಾಗಿತ್ತು . ನಾನು ನನ್ನ ತಂದೆ ತಾಯಿ ಜೊತೆಗೆ ಅಂಬ್ಯೂಲೆನ್ಸ್ ನಲ್ಲಿ ಆಸ್ಪತ್ರೆಗೆ ಹೋದೆ . ಎಲ್ಲಿ , ಯಾರು , ಯಾವುದರಿಂದ ಹೊಡೆದರು ಎಂದು ನಾನು ವೈದ್ಯರಿಗೆ ಹೇಳಿದ್ದೇನೆ . ಘಟನೆಯಾದ ಮಾರನೇ ದಿನ ಭಾನುವಾರ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ . ಅದರಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಅಡಿಕೆ ಗಿಡಗಳಿಗೆ ಬೆಂಕಿ ಇಟ್ಟ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ . ಆರೋಪಿಗಳು ನಮ್ಮ ತಂದೆ , ತಾಯಿ ಮೇಲೆ ಹಲ್ಲೆ ಮಾಡಿ ಗಲಾಟೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕುರಿ

ಹೋಗಲು ದಾರಿ ಬಿಡಬೇಕೆಂದು ಗಲಾಟೆ ಮಾಡಿದರು ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿ . ಯಾವುದೇ ಗಲಾಟೆಯಾಗಿಲ್ಲ , ಗಲಾಟೆಯಲ್ಲಿ ನಮಗೆ ಪೆಟ್ಟಾಗಿಲ್ಲ , ಆದರೂ ನನ್ನ ತಂದೆ ತಾಯಿ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದ ಅವಾಚ್ಯ ಶಬ್ದಗಳಿಂದಲೇ ಬೈದರು ಎಂದು ಪೊಲೀಸರಿಗೆ ಹೇಳಿದ್ದೇನೆ . ಯಾರು ಜಾತಿ ನಿಂದನೆ ಮಾಡಿದರು ಎಂದು ನಿರ್ದಿಷ್ಟವಾಗಿಹೇಳಲಾಗುವುದಿಲ್ಲ .

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.